ಈ) ಹೌದು. ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬವಾಗುತ್ತಿರುವುದು, ಫಲಾನುಭವಿಗಳು ಕಡುಬಡವರಾಗಿರುವುದರ ಜೊತೆಗೆ ಕೂಲಿಗಾಗಿ ವಲಸೆ ಹೋಗುತ್ತಿದ್ದು, ನಿಗದಿತ ಅವಧಿಯಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳದಿರುವುದು ಮತ್ತು ಮಳೆಗಾಲದಲ್ಲಿ ಕಾಮಗಾರಿ ನಿಧಾನಗೊಂಡಿರುವುದು ಪ್ರಗತಿ ಕುಂಠಿತವಾಗಲು ಕಾರಣಗಳಾಗಿವೆ.

ರಾಜ್ಯದಲ್ಲಿ ಆಶ್ರಯ ಯೋಜನೆಯ ಸಾಲ ಮನ್ನಾ ಮಾಡುವ ಬಗ್ಗೆ

215 (483) ಶ್ರೀ ರಮಾನಾಥ್ ರೈ ಬಿ. (ಬಂಟ್ವಾಳ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳ ಸಾಲ ಮರುಪಾವತಿ ಮಾಡದವರ ಹಣದ ಮೊತ್ತವೆಷ್ಟು?

ಆ) ಈ ಸಾಲವನ್ನು ಮನ್ನಾ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಇ) ಇದ್ದಲ್ಲಿ ಯಾವಾಗ ಮನ್ನಾ ಮಾಡಲಾಗುವುದು ಮತ್ತು ಯಾವ ಹಂತದಲ್ಲಿ ಮನ್ನಾ ಮಾಡಲಾಗುವುದು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳ ಸಾಲ ಮರು ಪಾವತಿ ಮಾಡದ ಹಣದ ಮೊತ್ತ 2230.35 ಕೋಟಿ ರೂ.ಗಳು.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.